ದಿನಾಂಕಃ 20-07-2022 ರಂದು ಪ್ರಮಾಣ ವಚನ ಭೋದಿಸಲಾಯಿತುಃ

**ಮುಂದುವರಿದ ಪಾಟೀ ಸವಾಲು ವಾದಿ ಪರ ವಕೀಲರಿಂದ ಃ**

ದಿಃ 10.07.1983ರ ಕ್ರಯಪತ್ರದಲ್ಲಿ ದಾವಾ ಸ್ವತ್ತಿನ ಚಕ್ಕುಬಂದಿ ಬಗ್ಗೆ ತಿಳಿದುಕೊಂಡಿರುತ್ತೇನೆ, ಪೂ-ಸರೋಜಮ್ಮನ ಜಮೀನು, ಪ-ಆಶಾರಾಣಿಯ ಜಮೀನು, ಉ- ಸ.ನಂ 159, ದ- ಸ.ನಂ 144, 143, 142, 141 ಇರುತ್ತದೆ. 1983ರಲ್ಲಿ ಸ.ನಂ. 145ಕ್ಕೆ ಖರೀದಿ ಕಾಲಕ್ಕೆ ಪೂರ್ವಕ್ಕೆ ಸರೋಜಮ್ಮನ ಜಮೀನು ಇದ್ದು ಈಗ ಪ್ರಸುತ್ತ 2022ರಲ್ಲಿ ನಂದೀಶಪ್ಪನ ಜಮೀನು ಇರುತ್ತದೆ ಎಂದರೆ ಗೊತ್ತಿಲ್ಲ, ಈಗ ಪೂರ್ವಕ್ಕೆ ಯಾರು ಇದ್ದಾರೆ ಎಂದು ಗೊತ್ತಿಲ್ಲ. 1983ರ ನಿಡಿ-1ರ ಕ್ರಯ ಪತ್ರಕ್ಕೆ ಸಾಕ್ಷಿದಾರರಾಗಿ ಪಟೇಲ್ ಜಯರಾಮ್ ಸಿಂಗ್ ಸಹಿ ಮಾಡಿದ್ದಾರೆ, ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನಿಡಿ-1ರ ಮೂಲ ಪತ್ರ ಈಗ ಲಕ್ಷ್ಮಣ ಗೌಡರ ಬಳಿ ಇದೆ. 2013ರಲ್ಲಿ ಸ.ನಂ. 145 ಅನ್ನು ಮಾರಾಟ ಮಾಡಿದ್ದು ಮೂಲ ಪತ್ರವನ್ನು ಲಕ್ಷ್ಮಣಗೌಡರಿಗೆ ನೀಡಲಾಗಿದೆ. ಲಕ್ಷ್ಮಣಗೌಡರಿಗೆ ಮಾರಾಟ ಮಾಡಿದ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತೀರಾ ಎಂದರೆ ಅಗ್ರಿಮೆಂಟ್ ಆಫ್ ಸೇಲ್ ಆಗಿದೆ ಎನ್ನುತ್ತಾರೆ. ನಿಡಿ-3 ಕ್ರಯದ ಕರಾರು ಪತ್ರದಲ್ಲಿ ಲಕ್ಷ್ಮಣಗೌಡರಿಗೆ ಸ.ನಂ.ನ 145ರ ಮೂಲ ಪತ್ರವನ್ನು ನೀಡಲಾಗಿದೆ ಎಂದು ಒಕ್ಕಣೆ ಬರೆಯಲಾಗಿದೆಯಾ? ಎಂದರೆ ಹೌದು. ಸದರಿ ನಿಡಿ-3 ಆದ ನಂತರ ಶುದ್ದ ಕ್ರಯ ಪತ್ರವನ್ನು ಲಕ್ಷ್ಮಣಗೌಡರಿಗೆ ಮಾಡಿಕೊಟ್ಟಿರುತ್ತೀರಾ ಎಂದರೆ ಇಲ್ಲ.

ಸದರಿ ನಿಡಿ-3ರ ಬಾದ್ಯತೆಯನ್ನು ಹೊರತುಪಡಿಸಿ ಬೈರೇಗೌಡರಿಗೆ ಜಿಪಿಎಯನ್ನು ಮಾಡಿಕೊಟ್ಟಿರುತ್ತೇವೆ ಎನ್ನುತ್ತಾರೆ. ಸದರಿ ಜಿಪಿಎಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಜಿಪಿಎಯನ್ನು ಮಾರ್ಚ್ 2022ರಲ್ಲಿ ಮಾಡಲಾಗಿದೆ. ಏತಕ್ಕಾಗಿ ನಿಡಿ-3 ಕ್ರಯ ಪತ್ರ ಮಾಡಿದ್ದರೂ ಸಹ ಜಿಪಿಎಯನ್ನು ಮಾಡಲಾಗಿದೆ ಎಂದರೆ ಜಿಪಿಎ ಹೋಲ್ಡರ್ ಬೈರೇಗೌಡನೇ ಲಕ್ಷ್ಮಣಗೌಡನಿಗೆ ಹಣ ಕೊಟ್ಟು ವ್ಯವಹಾರ ಮಾಡಿದ್ದ, ಆದ ಕಾರಣ ಜಿಪಿಎಯನ್ನು ಬೈರೇಗೌಡನಿಗೆ ಮಾಡಲಾಗಿದೆ ಎನ್ನುತ್ತಾರೆ. ಸದರಿ ಜಿಪಿಎರಲ್ಲಿ ಲಕ್ಮ್ಮಣಗೌಡ ಮತ್ತು ಕೇಶವಮೂರ್ತಿ ಏನಾದರೂ ಸಹಿ ಮಾಡಿರುತ್ತಾರೆಯೇ ಎಂದರೆ ಇಲ್ಲ.

1997ರಲ್ಲಿ ಸ.ನಂ. 145ರಲ್ಲಿ ನನ್ನ ತಂದೆ 2 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ನನ್ನ ತಂದೆ ದಂದಪ್ಪ. ನನ್ನ ತಂದೆ ದಂಪ್ಪನಿಗೆ ಸ.ನಂ. 145ರಲ್ಲಿ 6 ಎಕರೆ ಜಮೀನು ಇದ್ದು, ಯಾವ ದಿಕ್ಕಿನ 2 ಎಕರೆ ಭಾಗವನ್ನು ಮಾರಾಟ ಮಾಡಲಾಗಿದೆ ಎಂದರೆ ಪೂರ್ವಕ್ಕೆ ಎನ್ನುತ್ತಾರೆ. ನಿಡಿ-2ರಲ್ಲಿ ನನ್ನ ತಂದೆ ಸ.ನಂ. 145ರಲ್ಲಿ 2 ಎಕರೆ ಜಮೀನನ್ನು ಮಾರಾಟ ಮಾಡುವಾಗ ಏನು ಚಕ್ಕುಬಂಧಿ ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-2ರ ಅನುಸಾರವಾಗಿ ನನ್ನ ತಂದೆ ದಂದಪ್ಪ 2 ಎಕರೆ ಜಮೀನನ್ನು ಒಟ್ಟು 6 ಎಕರೆ ವಿಸ್ತೀರ್ಣದಲ್ಲಿ ಪೂರ್ವ ಭಾಗವನ್ನು ಉಳಿಸಿಕೊಂಡು ಪಶ್ಚಿಮದ ಭಾಗವನ್ನು ಪಾಪಣ್ಣ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದು ನಿಡಿ-2ರಲ್ಲಿ ಬರೆಯಲಾಗಿದೆ ಎಂದರೆ ಸರಿ. ಲಕ್ಷ್ಮಣಗೌಡ ಹಾಗೂ ಕೇಶವಮೂರ್ತಿಗೆ ಕ್ರಯದ ಕರಾರು ಪತ್ರವನ್ನು ಸ.ನಂ 145 6 ಎಕರೆಗೆ ಬಗ್ಗೆ ಮಾಡಿದ್ದು ಸದರಿ ಕ್ರಯದ ಕರಾರು ಪತ್ರ ನಿಡಿ-33ಕ್ಕೆ ಪಾಪಣ್ಣನ ಸಹಿ ಏನಾದರೂ ಸಹಿ ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ.

ನನ್ನ ತಂದೆ ಸ.ನಂ 145ರಲ್ಲಿ 2 ಎಕರೆ ಈಗಾಗಲೇ ಮಾರಾಟ ಮಾಡಿದ್ದರೂ ಸಹ ಹೇಗೆ ನಿಡಿ-3ರಲ್ಲಿ 6 ಎಕರೆ ಬಗ್ಗೆ ಕ್ರಯ ಪತ್ರ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಪಾಪಣ್ಣನ ಕಡೆಯಿಂದ ಎದುರುನುಡಿ ಕರಾರು ಪತ್ರ ಆಗಿದ್ದು ಸದರಿ ಪಾಪಣ್ಣನ ಕಡೆಯಿಂದ ಎದುರುನುಡಿ ಕರಾರು ಪತ್ರದ ಅನುಸಾರವಾಗಿ ನಮ್ಮ ಕಡೆಯಿಂದ ಸೇಲ್ ಡೀಡ್ ಮಾಡಿಸಿಕೊಂಡು 37 ಲಕ್ಷ ರೂ ಹಣವನ್ನು ತೆಗೆದುಕೊಂಡು ಮಾರ್ಚ್ 2022ರಲ್ಲಿ ಮಾಡಿಸಿಕೊಂಡಿರುತ್ತೇವೆ ಎನ್ನುತ್ತಾರೆ. ನಿಡಿ-3ರಲ್ಲಿ ಪಾಪಣ್ಣನ ಕಡೆಯಿಂದ ಎದುರುನುಡಿ ಕರಾರು ಪತ್ರ ಮಾಡಿಸಿ ಕೊಂಡಿದ್ದೇವೆ ಎಂದು ನಿಡಿ-3ರಲ್ಲಿ ನಮೂದು ಮಾಡಲಾಗಿದೆ. ಪಾಪಣ್ಣನ ಕಡೆಯಿಂದ ಎದುರುನುಡಿ ಕರಾರು ಪತ್ರವನ್ನು ಮಾಡಿಸಿಕೊಂಡಿದ್ದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಹೌದು. ನಿಡಿ-2ರ ಪ್ರಕಾರ ಪಾಪಣ್ಣನಿಗೆ ಸ.ನಂ 145ರಲ್ಲಿ 2 ಎಕರೆಯನ್ನು, 6 ಎಕರೆಯ ಪಶ್ಚಿಮದ ದಿಕ್ಕಿಗೆ ಪಾಪಣ್ಣನಿಗೆ ಸ್ವಾಧೀನ ಕೊಟ್ಟಿ ದ್ದೀರ ಎಂದರೆ ಇಲ್ಲ, ನಾವೇ ಸ್ವಾಧೀನದಲ್ಲಿರುತ್ತೇವೆ ಎನ್ನುತ್ತಾರೆ. ನನ್ನ ದೊಡ್ಡ ಅಣ್ಣ-ಚೆನ್ನರಾಯಪ್ಪ ನಿಡಿ-2ಕ್ಕೆ ಸಹಿ ಮಾಡಿರುವುದಿಲ್ಲ, ಖಾತೆಗೆ ಆತ ತಕರಾರು ಸಲ್ಲಿಸಿದ್ದ, ಆದ ಕಾರಣ ಸ್ವಾಧೀನ ನೀಡಿರುವುದಿಲ್ಲ. ನನ್ನ ಅಣ್ಣ-ಚೆನ್ನರಾಯಪ್ಪ ಮಾಲೂರು ತಹಸೀಲ್ದಾರರ ಬಳಿ ಖಾತೆಗೆ ತಕರಾರು ಸಲ್ಲಿಸಿದ್ದರು. ಕೇಸ್ ನಂಬರ್ ನನಗೆ ಗೊತ್ತಿಲ್ಲ, ಅದಕ್ಕೆ ಸಂಬಂಧಿಸಿದಂತೆ ದಾಖಲೆಯನು ಹಾಜರುಪಡಿಸಿಲ್ಲ, ಆ ದಾಖಲೆ ಇದೆಯಾ ಎಂದರೆ ಇದೆಯೋ ಇಲ್ಲವೋ ನೋಡಬೇಕು.

ನನ್ನ ತಂದೆ ದಿಃ 04.09.2010ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮತ್ತು ನನ್ನ ಅಣ್ಣ-ತಮ್ಮಂದಿರು ನನ್ನ ತಂದೆ ಬದುಕಿದ್ದಾಗ ನಮ್ಮ ಕುಟುಂಬದ



ಆಸ್ತಿಗಳನ್ನು ಭಾಗ ಮಾಡಿಕೊಂಡಿರುತ್ತೀರಾ ಎಂದರೆ ಇಲ್ಲ. ಸ.ನಂ 145ರ ಬಗ್ಗೆ ಯೂವುದಾದರೂ ಭಾಗ ಆಗಿದೆಯಾ ಎಂದರೆ ಇಲ್ಲ. ಸ.ನಂ 145ಕ್ಕೆ ನನ್ನ ತಂದೆಯ ಹೆಸರಿನಲ್ಲಿ ಖಾತೆ ಹಾಗೂ ಪಹಣಿ ಇತ್ತು ಎಂದರೆ ಹೌದು. ಆ ನಂತರ ಎಂ. ಆರ್. ನಂ. 19/2012-13 ರಂತೆ ನಾವು ಪವತಿಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಹೌದು. ಲಕ್ಷ್ಮಣಗೌಡ ಹಾಗೂ ಕೇಶವಮೂರ್ತಿಗೆ ಮಾಡಿಕೊಟ್ಟಂತಹ ನಿಡಿ-3ರಲ್ಲಿ ಸ.ನಂ 145 ನನ್ನ ತಂದೆಯ ಸ್ವಯೂರ್ಜಿತ ಆಸ್ತಿ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ-3ರಲ್ಲಿ ಕ್ರಯದ ಕರಾರು ಪತ್ರದಲ್ಲಿ 6 ಎಕರೆಗೆ ಮಾಡಿಕೊಡುವ ಹಕ್ಕು, ಸ್ವಾಧೀನ ನಮಗೆ ಇರಲಿಲ್ಲ ಎಂದರೆ ಸರಿಯಲ್ಲ.

ವಾದಿ ಶಾರದಮ್ಮನಿಗೆ ಅಕ್ಕ-ತಂಗಿಯರು ಹಾಗೂ ಅಣ್ಣ-ತಮ್ಮಂದಿರು 4 ಜನ ಹೆಣ್ಣು ಮಕ್ಕಳು ಹಾಗೂ ಒಂದು ಗಂಡು ಇರುತ್ತಾರೆ. ಶಾರದಮ್ಮನ ಅಣ್ಣ-ಚೆನ್ನಮರಿಯಪ್ಪ ಮಲ್ಲಸಂದ್ರದಲ್ಲಿ ವಾಸ ಇರುತ್ತಾರೆ. ಸದರಿ ಚೆನ್ನಮರಿಯಪ್ಪ ಮಲ್ಲಸಂದ್ರದಲ್ಲಿ ಜೀವನ ಮಾಡಿ, ಮೃತಪಟ್ಟ ನಂತರ ಆತನ ಮಕ್ಕಳು ಅಲ್ಲೇ ಜೀವನ ಮಾಡುತ್ತಿದ್ದಾರೆ ಎಂದರೆ ಹೌದು. ದಂದಪ್ಪ 2001ರಲ್ಲಿ ಶಾರದಮ್ಮನಿಗೆ ವಿಲ್ ಮಾಡಿದ ನಂತರ ಯಾವುದೇ ಪತ್ರ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ದಂದಪ್ಪ 2001ರಿಂದ 2010ರ ತನಕ ಅಂದರೆ ಆತ ಮೃತಪಡುವವರೆಗೂ ಸದರಿ ಶಾರದಮ್ಮನಿಗೆ ಮಾಡಿದ ವಿಲ್ ಅನ್ನು ಕ್ಯಾನ್ಸಲ್

ಮಾಡಿಲ್ಲ ಎಂದರೆ  ನಮಗೆ ಗೊತ್ತಿಲ್ಲ. ನಮ್ಮ ತಂದೆ ಮೃತಪಡುವವರೆಗೂ ನಾವು ಹಾಗೂ ಶಾರದಮ್ಮ ಚೆನ್ನಾಗಿದ್ದೆವು ಎಂದರೆ ಸರಿಯಲ್ಲ.  ನಮಗೂ ಹಾಗೂ



ವಾದಿಯ ಕುಟುಂಬದವರಿಗೂ ನಮ್ಮ ತಂದೆಯ ಜೀವಿತ ಕಾಲದವರೆಗೂ ಯಾವುದೇ  ದ್ವೇಷ ಇರಲಿಲ್ಲ. ವಾದಿಯು ನನ್ನ ತಂದೆಯ ಅಣ್ಣನ ಮಗಳು.

**ಮುಂದುವರಿದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಗಿದೆಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

**(ಲತಾದೇವಿ ಜಿ.ಎ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.